# ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ ೨೩೬ ಇಎಸ್‌ಟಿ(೭) ೨೦೧೮

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-೫೬೦ ೦೦೧.
ದಿನಾಂಕ:೧೨/೦೨/೨೦೧೯

## ಸುತ್ತೋಲೆ

ವಿಷಯ: ಸಂಸತ್ ಸದಸ್ಯರು: ವಿಧಾನ ಮಂಡಲದ ಸದಸ್ಯರುಗಳನ್ನು ಸರ್ಕಾರಿ ಸಮಾರಂಭಗಳಿಗೆ ಆಹ್ವಾನಿಸುವ ಬಗ್ಗೆ : ಅವರುಗಳಿಂದ ಬಂದ ಪತ್ರಗಳಿಗೆ ಉತ್ತರಿಸುವಲ್ಲಿ ಹಾಗೂ ಶಿಷ್ಟಾಚಾರ ಕುರಿತಂತೆ ಪಾಲಿಸಬೇಕಾದ ನೀತಿ ನಿಯಮಗಳ ಬಗ್ಗೆ ಮತ್ತು ಅಧಿಕಾರಿಗಳು ಅವರಿಗೆ ಯಾವ ರೀತಿಯ ಗೌರವ ತೋರಿಸಬೇಕು ಹಾಗೂ ಅವರುಗಳೊಡನೆ ಹೇಗೆ ವರ್ತಿಸಬೇಕೆಂಬ ಬಗ್ಗೆ

*******

ಪ್ರಜಾಪ್ರಭುತ್ವದಲ್ಲಿ ಚುನಾಯಿತ ಪ್ರತಿನಿಧಿಗಳಾದ ಸಂಸತ್ ಸದಸ್ಯರು ಹಾಗೂ ಶಾಸಕರುಗಳ ಸ್ಥಾನವು ಮಹತ್ವಪೂರ್ಣವಾಗಿದ್ದು, ಅವರುಗಳು ಸಾರ್ವಜನಿಕರ ಹಾಗೂ ಆಡಳಿತ ವ್ಯವಸ್ಥೆಯ ನಡುವೆ ಪ್ರಮುಖ ಕೊಂಡಿಯಾಗಿರುತ್ತಾರೆ. ಸರ್ಕಾರದ ಕಛೇರಿಗಳಿಗೆ ಸಂಸತ್ ಸದಸ್ಯರು ಹಾಗೂ ಶಾಸಕರುಗಳು ಭೇಟಿ ನೀಡಿದಾಗ. ಅಧಿಕಾರಿಗಳು ಅವರಿಗೆ ಯಾವ ರೀತಿಯ ಗೌರವ ತೋರಿಸಬೇಕು ಹಾಗೂ ಅವರುಗಳಿಗೆ ಹೇಗೆ ವರ್ತಿಸಬೇಕೆಂಬ ಬಗ್ಗೆ, ಸ್ಥಳೀಯ ಶಾಸಕರನ್ನು ಹಾಗೂ ಚುನಾವಣಾ ಕ್ಷೇತ್ರದ ಸಂಸತ್ ಸದಸ್ಯರನ್ನು ಸರ್ಕಾರದ ಸಮಾರಂಭಗಳಲ್ಲಿ ಮುಖ್ಯ ಅತಿಥಿಗಳನ್ನಾಗಿ ಆಹ್ವಾನಿಸುವ ಬಗ್ಗೆ, ಹಾಗೂ ಅವರುಗಳಿಗೆ ತೋರಿಸಬೇಕಾದ ಗೌರವ ಮತ್ತು ಸೌಜನ್ಯತೆಯ ಶಿಷ್ಟಾಚಾರದ ಬಗ್ಗೆ ಮತ್ತು ಅವರ ಅಭಿಪ್ರಾಯಗಳನ್ನು ಪಡೆಯುವುದರ ಬಗ್ಗೆ, ಸರ್ಕಾರದ ವತಿಯಿಂದ ಏರ್ಪಡಿಸಲಾಗುವ ಸಭೆ/ಸಮಾರಂಭಗಳಿಗೆ ವಿಧಾನ ಮಂಡಲದ ಮಾನ್ಯ ಸದಸ್ಯರುಗಳನ್ನು ಆಹ್ವಾನಿಸುವಲ್ಲಿ ಪಾಲಿಸಬೇಕಾದ ಶಿಷ್ಟಾಚಾರದ ಬಗ್ಗೆ, ಸಂಸತ್ ಸದಸ್ಯರ ಹಾಗೂ ರಾಜ್ಯ ವಿಧಾನಮಂಡಲದ ಸದಸ್ಯರಿಂದ ಬಂದ ಪತ್ರಗಳಿಗೆ ಆದ್ಯತೆಯ ಮೇರೆಗೆ ಕ್ರಮಕೈಗೊಂಡು ತಕ್ಷಣ ಉತ್ತರ ನೀಡುವ ಬಗ್ಗೆ, ಸರ್ಕಾರಿ ಕಾರ್ಯಕ್ರಮಗಳಲ್ಲಿ ಸ್ಥಳೀಯ ಶಾಸಕರು ಅಧ್ಯಕ್ಷತೆ ವಹಿಸುವ ಬಗ್ಗೆ- ಈ ರೀತಿ ಹಲವು ಶಿಷ್ಟಾಚಾರದ ಬಗ್ಗೆ ಸ್ಪಷ್ಟೀಕರಣ ನೀಡುವ ಕುರಿತು ವಿಸ್ತೃತವಾದ ಸೂಚನೆಗಳನ್ನು ಸರ್ಕಾರಿ ಆದೇಶ/ ಸುತ್ತೋಲೆ/ಅಧಿಕೃತ ಜ್ಞಾಪನಗಳ ಮೂಲಕ ಸರ್ಕಾರವು ನೀಡಿದೆ.

ಈ ಬಗ್ಗೆ ೧೦೩ ಪುಟಗಳನ್ನೊಳಗೊಂಡ ಸರ್ಕಾರಿ ಆದೇಶ/ಸುತ್ತೋಲೆ/ಅಧಿಕೃತ ಜ್ಞಾಪನಗಳ ಸಂಗ್ರಹವನ್ನು ತಾಂತ್ರಿಕ ಶಿಕ್ಷಣ ಇಲಾಖೆಯ ಅಂತರ್ಜಾಲತಾಣದಲ್ಲಿ ಈಗಾಗಲೇ ನೀಡಲಾಗಿದೆ. ಈ ಸುತ್ತೋಲೆ ಆದೇಶಗಳು ಸಿ.ಆ.ಸು. ಇಲಾಖೆಯ ಅಂತರ್ಜಾಲ ತಾಣವಾದ **www.dpar.kar.nic.in** ನಲ್ಲಿ ಸಹ ಲಭ್ಯವಿರುತ್ತದೆ. ಸದರಿ ಸರ್ಕಾರಿ ಆದೇಶ/ ಸುತ್ತೋಲೆ/ಅಧಿಕೃತ ಜ್ಞಾಪನಗಳನ್ನು ಕೂಲಂಕುಷವಾಗಿ ಓದಿಕೊಂಡು ಅದರಂತೆ ಕಟ್ಟುನಿಟ್ಟಾಗಿ ಶಿಷ್ಟಾಚಾರವನ್ನು ಪಾಲಿಸುವಂತೆ ಸೂಚಿಸಲಾಗಿದೆ. ಶಿಷ್ಟಾಚಾರವನ್ನು ಉಲ್ಲಂಘಿಸುವ ಅಧಿಕಾರಿಗಳ ವಿರುದ್ಧ ಸೂಕ್ತ ಶಿಸ್ತುಕ್ರಮವನ್ನು ಕೈಗೊಳ್ಳಲಾಗುವುದೆಂದು ಸಹ ಈ ಮೂಲಕ ತಿಳಿಸಲಾಗಿದೆ.

ನಿರ್ದೇಶಕರು

ಇವರಿಗೆ: ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ

ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರ ಕಛೇರಿಯ ಎಲ್ಲಾ ಅಧಿಕಾರಿ/ಸಿಬ್ಬಂದಿಗಳ ಮತ್ತು ಎಲ್ಲಾ ಸರ್ಕಾರಿ/ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳ/ಪಾಲಿಟೆಕ್ನಿಕ್‌ಗಳ/ಕಿರಿಯ ತಾಂತ್ರಿಕ ಶಾಲೆಗಳ ಪ್ರಾಂಶುಪಾಲರುಗಳಿಗೆ – ಇಲಾಖಾ ವೆಬ್‌ಸೈಟ್ ಮೂಲಕ

ಪ್ರತಿ:

೧. ಇ-ಆಡಳಿತ ಘಟಕಕ್ಕೆ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಲು

೨. ನಿರ್ದೇಶಕರ ಆಪ್ತಶಾಖೆಗೆ ೩. ಕಟ್ಟಡ ವಿಭಾಗ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ ಬೆಂಗಳೂರು.

Sh E-7 Circular